# <u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ..... ಚಿತ್ತಾಪೂರ</u>

C.C No. 158/2017
CW-8 PW-6

ಹೆಸರು ಃ ಅನೀಲ ಚವ್ಹಾಣ

ತಂದೆ ಹೆಸರು ಃ ಬಾಬು ಚವ್ಹಾಣ

ವಯಸ್ಸು ಃ 32 ವರ್ಷ

ಉದ್ಯೋಗ ಃ ಕೂಲಿ ಕೆಲಸ

ವಾಸ ಸ್ಥಳ ಃ ಸುಗೂರ(ಕೆ), ತಾ: ಕಾಳಗಿ.

ಹಾಲಿವಾಸ: ಗೋಳಾ(ಬಿ), ತಾ: ಆಳಂದ.

---

**<u>ಪ್ರಮಾಣವಚನ ಭೋಧಿಸಲಾಯಿತು. ದಿಃ 02-04-2025</u>**

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದ</u>**

ಚಾಸಾ-6 ನನ್ನ ತಾಯಿ, ಚಾಸಾ-7 ನನ್ನ ಅಕ್ಕ ಇರುತ್ತಾರೆ. ನ್ಯಾಯಾಲಯದ ಮುಂದಿರುವ 2, 3 ಮತ್ತು 6ನೇ ಆರೋಪಿಗಳು ಮತ್ತು ಗೈರು ಹಾಜರಿರುವ ಆರೋಪಿ 4, 5 ಮತ್ತು 7 ರವರು ನನ್ನ ಸಂಬಂಧಿಕರು ಇರುತ್ತಾರೆ. 1ನೇ ಆರೋಪಿಯು ಸಹ ನನ್ನ ಸಂಬಂಧಿಕನಿದ್ದು, ಆತನು ಈಗ ಮರಣ ಹೊಂದಿರುತ್ತಾನೆ. ಚಾಸಾ-1 ರವರ ಪರಿಚಯ ನನಗೆ ಇರುತ್ತದೆ.

ಸುಮಾರು 9 ವರ್ಷಗಳ ಹಿಂದೆ ಚಾಸಾ-1 ರವರು ಹೊಲದ ಅಳತೆ ಮಾಡಲು ಹೋದಾಗ, ಚಾಸಾ-9ರವರು ಸಹ ಅಳತೆ ಮಾಡುವ ಸಂದರ್ಭದಲ್ಲಿ ಹಾಜರಿದ್ದು, ಆ ಸಮಯದಲ್ಲಿ ನ್ಯಾಯಾಲಯದ ಮುಂದಿರುವ ಆರೋಪಿಗಳು, ಗೈರು ಹಾಜರಿರುವ ಆರೋಪಿಗಳು ಮತ್ತು ಮೃತ 1ನೇ ಆರೋಪಿಯು ಸಹ ಹೊಲದ ಅಳತೆ ಮಾಡುವ ಸಂದರ್ಭದಲ್ಲಿ ಹಾಜರಿದ್ದು, ಮೃತ 1ನೇ ಆರೋಪಿಯು ನನ್ನ ತಾಯಿ ಚಾಸಾ-6 ರವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿರುತ್ತಾರೆ. 3ನೇ ಆರೋಪಿಯು ಚಾಸಾ-1ರವರ ಬಳಿ ಇದ್ದ ಫೈಲ್ ನ್ನು ಕಸಿದುಕೊಂಡು ಓಡಿ ಹೋದನು. ನ್ಯಾಯಾಲಯದ ಮುಂದಿರುವ ಆರೋಪಿಗಳು ಮತ್ತು ಇನ್ನೂಳಿದ ಆರೋಪಿಗಳು ಸಹ ಚಾಸಾ-6 ಮತ್ತು ನಮಗೆ ಅವಾಚ್ಯ ಶಬ್ದಗಳಿಂದ ನಿಂದಿಸಿರುತ್ತಾರೆ. ಚಾಸಾ-6 ಮತ್ತು ಚಾಸಾ-9 ರವರು ಕಾಳಗಿ ಪೊಲೀಸ ಠಾಣೆಗೆ ಹೋಗಿ ಒಂದು ದೂರನ್ನು ನೀಡಿರುತ್ತಾರೆ. ನಾನು ಸಹ ಹೋಗಿ ದೂರನ್ನು ನೀಡಿರುತ್ತೇನೆ.

(ಮಾನ್ಯ ಸ ಸ ಅ ರವರು ಸಾಕ್ಷಿಯನ್ನು ಭಾಗಶ: ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ದಾಖಲೆಗಳನ್ನು ಪರಿಶೀಲಿಸಿ ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸ.ಸ.ಅಭಿಯೋಜಕರವರಿಂದ

ನನ್ನ ತಂದೆ ಸುಮಾರು 20 ವರ್ಷಗಳ ಹಿಂದೆ ಮರಣ ಹೊಂದಿರುತ್ತಾನೆ ಎಂದರೆ ಸರಿ. ನನ್ನ ತಾಯಿ ತನ್ನ ಮಾವ ಮತ್ತು ಭಾವನ ಹೆಸರಿನಲ್ಲಿರುವ ಜಮೀನುಗಳಲ್ಲಿ ಪಾಲು ಕೊಡಬೇಕೆಂದು ಚಿತ್ತಾಪೂರ ಸಿವಿಲ್ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿದ್ದೇವು ಎಂದರೆ ಸರಿ. ಸದರಿ ದಾವೆಯಲ್ಲಿ ನಮಗೆ ಪಾಲು ಕೊಡಬೇಕೆಂದು ನ್ಯಾಯಾಲಯ ತೀರ್ಪು ನೀಡಿತ್ತು ಎಂದರೆ ಸರಿ. ಸದರಿ ತೀರ್ಪಿನ ಆದೇಶದಂತೆ ನಾವು ಚಾಸಾ-1 ಮತ್ತು 9 ರವರು ಸರ್ವೆ ನಂಬರ 208/4 ರ ಭೂಮಿಯನ್ನು ಸರ್ವೆ ಮಾಡಲು ಹೋಗಿದ್ದೇವು ಎಂದರೆ ಸರಿ . ಅದೇ ರೀತಿ ಈ ಪ್ರಕರಣದ ಆರೋಪಿಗಳು ಸಹಾ ಜಮೀನಿಗೆ ಬಂದಿದ್ದರು ಎಂದರೆ ಸರಿ. ಚಾಸಾ-1 ರವರು ಆರೋಪಿಗಳಿಗೆ ಜಮೀನು ಅಳತೆ ಮಾಡುವ ಬಗ್ಗೆ ಕೋರ್ಟ್ ಆದೇಶ ನೋಟಿಸಿನ ಬಗ್ಗೆ ತಿಳಿ ಹೆಳುತ್ತಿದಾಗ ಎಲ್ಲಾ ಆರೋಪಿಗಳು ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿ. ಚಾಸಾ-9 ರವರು ಆರೂಪಿಗಳಿಗೆ ಅವಾಚ್ಯ ಶಬ್ದಗಳಿಂದ ಬೈಯುವದು ಸರಿಯಲ್ಲ ಎಂದು ತಿಳಿಸಿ ದೂರ ಸರಿಯುತ್ತಿರುವಾಗ ಚಾಸಾ-6 ರವರು ನಡುವೆ ಬಿಡಿಸಲು ಹೋದಾಗ ಮೃತ 1 ನೇ ಆರೋಪಿ, 3 ಮತ್ತು 5 ನೇ ಆರೋಪಿಗಳು ಚಾಸಾ-6 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಮತ್ತು ಚಾಸಾ-6 ರವರ ಕೈ ಹಿಡಿದು ಎಳೆದಾಡಿರುತ್ತಾರೆ ಎಂದರೆ ಸರಿ. 4 ನೇ ಆರೋಪಿಯ ಚಾಸಾ-1 ರವರ ಕೈಯಲ್ಲಿದ್ದ ದಾಖಲಾತಿಗಳನ್ನು ಕಸಿದುಕೊಂಡು ಹೋಗಿರುತ್ತಾನೆ ಎಂದರೆ ಸರಿ. ನಂತರ ಚಾಸಾ-9 ರವರು ಸದರಿ ದಾಖಲಾತಿಗಳನ್ನು ಮರಳಿ ಕೊಡಲು ಹೇಳಿದ್ದರು ಸಹಾ 3 ನೇ ಆರೋಪಿಯ ಕೈಗೆ ದಾಖಲಾತಿ ಕೊಟ್ಟಾಗ ಸದರಿ 3 ನೇ ಆರೋಪಿ ದಾಖಲಾತಿಗಳನ್ನು ತೆಗೆದುಕೊಂಡು ಓಡಿ ಹೋಗಿರುತ್ತಾನೆ ಎಂದರೆ ಸರಿ. ನಂತರ ಆರೋಪಿಗಳೆಲ್ಲರೂ ಇನ್ನೊಮ್ಮ ಅಳತೆ ಮಾಡಲು ಬಂದರೆ ಜೀವ ಸಹಿತ ಬಿಡುವುದಿಲ್ಲ ಎಂದು ನಮಗೆ ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ.

ದಿಃ 24/11/2016 ರಂದು ನಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ .

ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಸಿ.ಬಿ.ಎ. ವಕೀಲರಿಂದ .

ನಾನು ಚಿಕ್ಕವನಿದ್ದಾಗಲೇ ನಮ್ಮ ತಾಯಿ ಚಾಸಾ-6 ಮತ್ತು ನನ್ನ ಅಕ್ಕ ಚಾಸಾ-7ರವರೊಂದಿಗೆ ಊರು ಬಿಟ್ಟು ಹೋಗಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಗೂರ(ಕೆ) ಗ್ರಾಮವನ್ನು ಬಿಟ್ಟು ಎಷ್ಟು ವರ್ಷಗಳು ಆಗಿರುತ್ತವೆ ಎಂದು ನನಗೆ ನೆನಪಿರುವುದಿಲ್ಲ. ನನ್ನ ತಂದೆ ತನ್ನ ಜೀವಿತಾವಧಿಯಲ್ಲಿ ಚಾಸಾ-6 ರವರಿಗೆ

ಬರುವಂತೆ ಕೇಳಿಕೊಂಡು ಪಂಚಾಯತಿ ಮಾಡಿರುವ ವಿಷಯ ನನಗೆ ಗೊತ್ತಿರುವುದಿಲ್ಲ. ನನ್ನ ತಾಯಿ ಸುಗೂರ(ಕೆ) ಗ್ರಾಮಕ್ಕೆ ಬರಲು ಯಾವತ್ತು ಒಪ್ಪಿರಲಿಲ್ಲ ಎಂದರೆ ಸರಿಯಲ್ಲ. ನಂತರ ನನ್ನ ತಂದೆ 2ನೇ ಆರೋಪಿತಳೊಂದಿಗೆ ಮದುವೆ ಆಗಿದ್ದನು ಎಂದರೆ ಸರಿಯಲ್ಲ.

ಸದರಿ ದಿನ ಅಳತೆ ಮಾಡುವುದಕ್ಕಿಂತ ಮುಂಚೆ ಸುಮಾರು 3-4 ಬಾರಿ ಅಳತೆ ಮಾಡಲು ಭೂಮಾಪಕರು ಹೊಲಕ್ಕೆ ಬಂದಿದ್ದರು. ದಿನಾಂಕ: 23-11-2016ರಂದು ಚಾಸಾ-1ರವರು ಅಳತೆ ಮಾಡಲು ಬರುತ್ತಿದ್ದೇವೆಂದು ನೋಟಿಸನ್ನು ನೀಡಿದ್ದರು. ಸದರಿ ನೋಟಿಸನ್ನು ನಾನು ಪೊಲೀಸರ ಮುಂದೆ ಹಾಜರುಪಡಿಸಿರುವುದಿಲ್ಲ.

ದಿನಾಂಕ: 23-11-2016ರಂದು ಚಾಸಾ-1 ರವರು ಹೊಲಕ್ಕೆ ಭೂ ಅಳತೆ ಮಾಡಲು ಬಂದಿದ್ದರು ಎಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 6ನೇ ಆರೋಪಿಯು ಸದರಿ ದಿನ ಘಟನಾ ಸ್ಥಳದಲ್ಲಿ ಹಾಜರಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಸದರಿ ದಿನ ಹಾಜರಿರಲಿಲ್ಲ, ಕೇವಲ ನಾನು, ಚಾಸಾ-1 ಮತ್ತು ಚಾಸಾ-9ರವರು ಮಾತ್ರ ಹೊಲಕ್ಕೆ ಅಳತೆ ಮಾಡಲು ಹೋಗಿದ್ದೇವು ಎಂದರೆ ಸರಿಯಲ್ಲ. 1ನೇ ಆರೋಪಿಯು ನಮಗೆ ಮಾಹಿತಿಯಿಲ್ಲದೇ ಹೇಗೆ ಅಳೆಯುತ್ತಿದ್ದೀರಿ ಎಂಬ ಬಗ್ಗೆ ಮಾತ್ರ ಪ್ರಶ್ನಿಸಿರುತ್ತಾರೆ ಎಂದರೆ ಸರಿಯಲ್ಲ. 1ನೇ ಆರೋಪಿಯು ನಮ್ಮನ್ನು ಕುರಿತು, ನಮಗೆ ಮಾಹಿತಿಯಿಲ್ಲದೇ ಅಳತೆಯುತ್ತಿದ್ದು, ಸದರಿ ವಿಷಯವನ್ನು ಮೇಲಾಧಿಕಾರಿಗಳಿಗೆ ತಿಳಿಸುತ್ತೇನೆಂದು ನುಡಿದಿದದ್ದರು ಎಂದರೆ ಸರಿಯಲ್ಲ. ಸದರಿ ದಿನ ಈ ಪ್ರಕರಣದ ಆರೋಪಿಗಳು ಯಾರು ಘಟನಾ ಸ್ಥಳಕ್ಕೆ ಬಂದಿರಲಿಲ್ಲ ಮತ್ತು ಸದರಿ ದಿನ ಯಾವುದೇ ಘಟನೆ ನಡೆದಿರಲಿಲ್ಲ ಎಂದರೆ ಸರಿಯಲ್ಲ.

ಆರೋಪಿಗಳ ವಿರುದ್ಧ ಒಂದು ಸುಳ್ಳು ದೂರನ್ನು ಚಾಸಾ-1ರವರು ನೀಡಿದ್ದು, ಸದರಿ ಪ್ರಕರಣಕ್ಕೆ ಅನುಕೂಲವಾಗುವಂತೆ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸುಮಾರು 9 ವರ್ಷಗಳ ಹಿಂದೆ ಚಾಸಾ-1 ರವರು ಹೊಲದ ಅಳತೆ ಮಾಡಲು ಹೋದಾಗ, ಚಾಸಾ-9ರವರು ಸಹ ಅಳತೆ ಮಾಡುವ ಸಂದರ್ಭದಲ್ಲಿ ಹಾಜರಿದ್ದು, ಆ ಸಮಯದಲ್ಲಿ ನ್ಯಾಯಾಲಯದ ಮುಂದಿರುವ ಆರೋಪಿಗಳು, ಗೈರು ಹಾಜರಿರುವ ಆರೋಪಿಗಳು ಮತ್ತು ಮೃತ 1ನೇ ಆರೋಪಿಯು ಸಹ ಹೊಲದ ಅಳತೆ ಮಾಡುವ ಸಂದರ್ಭದಲ್ಲಿ ಹಾಜರಿದ್ದು, ಮೃತ 1ನೇ ಆರೋಪಿಯು ನನ್ನ ತಾಯಿ ಚಾಸಾ-6 ರವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3ನೇ ಆರೋಪಿಯು ಚಾಸಾ-1ರವರ ಬಳಿ ಇದ್ದ ಫೈಲ್ ನ್ನು ಕಸಿದುಕೊಂಡು ಓಡಿ ಹೋದನು ಎಂದು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಗಳು ಮತ್ತು ಇನ್ನೂಳಿದ ಆರೋಪಿಗಳು ಸಹ ಚಾಸಾ-6 ಮತ್ತು ನಮಗೆ ಅವಾಚ್ಯ ಶಬ್ದಗಳಿಂದ ನಿಂದಿಸಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ. ಹೇ ಕೇ.ಸರಿ ಇದೆ.

ಸಿವಿಲ್ & J.M.F.C ನ್ಯಾಯಾಧೀಶರು, ಚಿತ್ತಾಪೂರ.